**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಪುಟ್ಟಣ್ಣ, ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) ಮತ್ತು ಶ್ರೀ ಬಸನಗೌಡ ಬಾದರ್ಲಿ ಇವರುಗಳು ನಿಯಮ 72ರ ಮೇರೆಗೆ ನೀಡಿರುವ ಸೂಚನಾ ಪತ್ರಕ್ಕೆ ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಹೇಳಿಕೆ**

**ವಿಷಯ**

ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಿಬ್ಬಂದಿಗೆ ಡಿಸೆಂಬರ್ 2025ರಲ್ಲಿ ಜಾರಿಯಾಗಿರುವ ಪರಿಷ್ಕೃತ ಅನುದಾನ ಸಂಹಿತೆಯ ಷಡ್ಯೂಲ್-2ರಲ್ಲಿ 0-07 ವರೆಗಿನ ಕಾರ್ಯಾಗಾರ ಮತ್ತು ಇಂಜಿನಿಯರಿಂಗ್ ಡ್ರಾಯಿಂಗ್ ಕಿರಿಯ ತರಬೇತಿ ಅಧಿಕಾರಿಗಳನ್ನು 0 ಎಂದು ತಿದ್ದುಪಡಿ ಮಾಡಿ ಇವರನ್ನು ಹೆಚ್ಚುವರಿ ಎಂದು ಪರಿಗಣಿಸಿ ಬೇರೆ ಬೇರೆ ವಿಷಯ ಭೋಧನೆ ಮಾಡಲು ನಿಯೋಜಿಸಲಾಗುತ್ತಿದೆ. ಆದರೆ ನವೆಂಬರ್ 2022, ಜನವರಿ 2026ರಲ್ಲಿ ಡಿಜಿಇಟಿ ಯವರು ಹೊರಡಿಸಿರುವ ಸುತ್ತೋಲೆ ಮತ್ತು ಟ್ರೈನಿಂಗ್ ಮ್ಯಾನ್ಯುಯಲ್ ಸ್ಕ್ಯಾಪ್ ಪ್ಯಾಟ್ರನ್‌ಗೆ ಇಲಾಖೆಯವರು ಹೊರಡಿಸಿರುವ ಸುತ್ತೋಲೆಗೆ ವಿರುದ್ಧವಾಗಿದೆ. ಡಿಜಿಇಟಿಯವರು ಡಿಸೆಂಬರ್ 2022 ಮತ್ತು ಜನವರಿ 2026ರ ಸುತ್ತೋಲೆಯಲಿ 0-144 ತರಬೇತಿದಾರರಿಗೆ ಒಬ್ಬರು ಇಂಜಿನಿಯರಿಂಗ್ ಡ್ರಾಯಿಂಗ್ ಹಾಗು ಕಾರ್ಯಾಗಾರ ಲೆಕ್ಕಾಚಾರ ಕಿರಿಯ ತರಬೇತಿದಾರ ಅಧಿಕಾರಿಯನ್ನು ನೇಮಿಸಿ ರಿಜಿಸ್ಟರ್ಡ್ ಮಾಡಿ ಡಿಜಿಇಟಿ ಗೆ ವರದಿ ಸಲ್ಲಿಸುವಂತೆ ನಿರ್ದೇಶಕರು ಡಿಜಿಇಟಿ ನವದೆಹಲಿಯವರು ಸುತ್ತೋಲೆ ಹೊರಡಿಸಿರುತ್ತಾರೆ. ತಪ್ಪಿದ್ದಲ್ಲಿ ಸಂಬಂದಪಟ್ಟ ಟ್ರೇಡ್/ಯುನಿಟ್‌ಗಳನ್ನು ಡಿ ಅಫೀಲಿಯೇಷನ್ ಮಾಡುವುದಾಗಿ ಎಚ್ಚರಿಕೆ ನೀಡಿದ್ದಾರೆ. ಆದ್ದರಿಂದ ಕಳೆದ 25-30 ವರ್ಷಗಳಿಂದ ಇಂಜಿನಿಯರಿಂಗ್ ಡ್ರಾಯಿಂಗ್ ಹಾಗು ಕಾರ್ಯಾಗಾರ ಲೆಕ್ಕಾಚಾರ ಮತ್ತು ವಿಜ್ಞಾನ ವಿಷಯ ಬೋಧನೆ ಮಾಡುತ್ತಿರುವ ಕಿರಿಯ ತರಬೇತಿ ಅಧಿಕಾರಿಗಳಿಗೆ ಇತರೆ ಬೇರೆ ವಿಷಯಗಳ ಬೋಧನೆ ಮಾಡಲು ಆದೇಶ ಮಾಡುತ್ತಿರುವುದರಿಂದ ಬದಲಾಗುತ್ತಿರುವ ತಂತ್ರಜ್ಞಾನ ಹಾಗು ಪಠ್ಯಕ್ರಮಗಳಿಂದಾಗಿ ತರಬೇತಿಗೆ ತೊಡಕಾಗಿ ಹಲವಾರು ಸಮಸ್ಯೆಗಳು ಸೃಷ್ಟಿಯಾಗುತ್ತಿವೆ ಎಂಬ ವಿಷಯವನ್ನು ನಿಯಮ 330 ರಲ್ಲಿ ಮಾನ್ಯ ವೈದ್ಯಕೀಯ ಶಿಕ್ಷಣ ಹಾಗು ಕೌಶಲ್ಯಾಭಿವೃದ್ಧಿ ಸಚಿವರಲ್ಲಿ ಪ್ರಸ್ತಾಪಿಸುತ್ತೇನೆ.

**ಹೇಳಿಕೆ**

ಕಾರ್ಯಾಗಾರ ಲೆಕ್ಕಾಚಾರ ಮತ್ತು ವಿಜ್ಞಾನ ಹಾಗೂ ಇಂಜಿನಿಯರಿಂಗ್ ಡ್ರಾಯಿಂಗ್ ವಿಷಯಗಳನ್ನು 2021-22 ನೇ ಸಾಲಿನಿಂದ ಪ್ರತಿ ವಿಷಯವನ್ನು ವಾರ್ಷಿಕವಾಗಿ ಬೋಧಿಸಲು 80 ಘಂಟೆಗಳ ಅವಧಿ ಹಾಗೂ 50 ಅಂಕಗಳಿಗೆ ಪರೀಕ್ಷೆ ನಡೆಸಲಾಗುತ್ತಿರುವುದನ್ನು ಡಿಜಿಟಿ ರವರು ಪ್ರತಿ ವಿಷಯವನ್ನು ವಾರ್ಷಿಕವಾಗಿ ಬೋಧಿಸಲು 40 ಘಂಟೆಗಳ ಅವಧಿಗೆ ನಿಗಧಿ ಪಡಿಸಿ, ಪ್ರತಿ ವಿಷಯಕ್ಕೆ 12 ಅಂಕಗಳಿಗೆ ಪರೀಕ್ಷೆ ನಿಗಧಿಪಡಿಸಿರುತ್ತಾರೆ ಹಾಗೂ ಕಾರ್ಯಾಗಾರ ಲೆಕ್ಕಾಚಾರ ಮತ್ತು ವಿಜ್ಞಾನ ಹಾಗೂ ಇಂಜಿನಿಯರಿಂಗ್ ಡ್ರಾಯಿಂಗ್ ವಿಷಯಗಳನ್ನು ವೃತ್ತಿತತ್ವ (Trade Theory) ವಿಷಯದ ಜೊತೆ ವಿಲೀನಗೊಳಿಸಲಾಗಿರುತ್ತದೆ. ವಾರ್ಷಿಕವಾಗಿ ಪ್ರತಿ ವಿಷಯ ಬೋಧಿಸಲು 40 ಘಂಟೆಗಳ ಕಾಲಾವಧಿ ಸೀಮಿತಗೊಳಿಸಿ Trade Theory Subject ಜೊತೆಗೆ ವಿಲೀನಗೊಳಿಸಿರುವುದರಿಂದ ಒಂದು ವೃತ್ತಿ ಘಟಕಕ್ಕೆ ವಾರದಲ್ಲಿ ಪ್ರತಿ ವಿಷಯಕ್ಕೆ 45 ನಿಮಿಷಗಳ ಅವಧಿ ಬೋಧಿಸಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಡಿ.ಜಿ.ಟಿ ರವರ ಪತ್ರ ಸಂಖ್ಯೆ: MSDE (DGT)-0708/2022-CD Dated: 10.11.2022 ಮತ್ತು DGT-MIS011/1/2025-0/0 DIR (TC) [57369] Dated.16.01.2026 ರಲ್ಲಿ ಕಾರ್ಯಾಗಾರ ಲೆಕ್ಕಾಚಾರ ಮತ್ತು ವಿಜ್ಞಾನ ಹಾಗೂ ಇಂಜಿನಿಯರಿಂಗ್ ಡ್ರಾಯಿಂಗ್ ವಿಷಯಗಳ ಬೋಧನೆಗೆ ಕ್ರಮವಾಗಿ ಪ್ರತಿ 144 ತರಬೇತಿದಾರರಿಗೆ ಒಬ್ಬರು ಕಿರಿಯ ತರಬೇತಿ ಅಧಿಕಾರಿ ಹಾಗೂ ಹೆಚ್ಚುವರಿಯಾಗಿ ಪ್ರವೇಶಾತಿ ಪಡೆಯುವ ಪ್ರತಿ 144 ತರಬೇತಿದಾರರಿಗೆ ಒಬ್ಬರು ಕಿರಿಯ ತರಬೇತಿ ಅಧಿಕಾರಿ ಬೋಧಿಸಲು ಅವಶ್ಯವಿರುವುದಾಗಿ ತಿಳಿಸಿರುತ್ತಾರೆ.

ಡಿ.ಜಿ.ಟಿ ರವರು ಪ್ರತಿ ವಿಷಯವನ್ನು ಬೋಧಿಸಲು 40 ಗಂಟೆಗಳಿಗೆ ಸೀಮಿತಗೊಳಿಸಿರುವುದರಿಂದ 1997 ರ ಅನುದಾನ ಸಂಹಿತೆಯಲ್ಲಿ ಕಾರ್ಯಾಗಾರ ಲೆಕ್ಕಾಚಾರ ಮತ್ತು ವಿಜ್ಞಾನ ಹಾಗೂ ಇಂಜಿನಿಯರಿಂಗ್ ಡ್ರಾಯಿಂಗ್ ವಿಷಯಗಳ ಬೋಧನೆಗೆ ಪ್ರತಿ 4 ಘಟಕಕ್ಕೆ ಒಬ್ಬರು ಕಿರಿಯ ತರಬೇತಿ ಅಧಿಕಾರಿಯವರಿಗೆ ವೇತನಾನುದಾನ ನೀಡಲು ಅವಕಾಶವಿರುತ್ತದೆ. ಸದರಿ ವಿಷಯಗಳ ಬೋಧನಾ ಅವಧಿ ಹಾಗೂ ಪರೀಕ್ಷಾ ಅಂಕಗಳನ್ನು ಡಿಜಿಟಿ ರವರು ಕಡಿತಗೊಳಿಸಿರುವುದರಿಂದ ಪರಿಷ್ಕೃತ ಅನುದಾನ ಸಂಹಿತ-2025 ರ ಷಡ್ಯೂಲ್-2 ರಲ್ಲಿ 8 ಘಟಕಗಳಿಗೆ (160 ತರಬೇತಿದಾರರು) ಒಬ್ಬರು ಕಿರಿಯ ತರಬೇತಿ ಅಧಿಕಾರಿ ರವರಿಗೆ ವೇತನಾನುದಾನ ನೀಡಲು ಅವಕಾಶವಿರುತ್ತದೆ. ಹಾಗೂ ಸದರಿ 8 ಘಟಕದಲ್ಲಿನ 160 ತರಬೇತಿದಾರರಿಗೆ ಬೋಧಿಸಲು ವಾರಕ್ಕೆ 12 ಘಂಟೆಗಳ ಬೋಧನಾ ಕಾರ್ಯಭಾರವಿರುತ್ತದೆ.

ಬೋಧನಾ ಅವಧಿ ಕಡಿಮೆ ಇರುವುದರಿಂದ 07 ವೃತ್ತಿ/ ಘಟಕದವರೆಗೆ ಕಾರ್ಯನಿರ್ವಹಿಸುತ್ತಿರುವ ಅನುದಾನಿತ ಸಂಸ್ಥೆಗಳಲ್ಲಿ ಕಾರ್ಯಾಗಾರ ಲೆಕ್ಕಾಚಾರ ಮತ್ತು ವಿಜ್ಞಾನ ಹಾಗೂ ಇಂಜಿನಿಯರಿಂಗ್ ಡ್ರಾಯಿಂಗ್ ವಿಷಯಗಳ ಬೋಧನೆಗೆ ವೃತ್ತಿ ತತ್ವ (Trade Theory) ವಿಷಯವನ್ನು ಬೋಧಿಸುವ ಅನುದಾನಿತ ಕಿರಿಯ ತರಬೇತಿ ಅಧಿಕಾರಿಗಳು ಬೋಧಿಸಬಹುದಾಗಿರುತ್ತದೆ. ಅಥವಾ ಸಂಸ್ಥೆಯ ಆಡಳಿತ ಮಂಡಳಿಯವರು ಪ್ರತ್ಯೇಕ ವ್ಯವಸ್ಥೆಯನ್ನು ಕಲ್ಪಿಸಿಕೊಂಡು ಸದರಿ ಸಿಬ್ಬಂದಿಯನ್ನು ಡಿಜಿಇಟಿ ರವರ ಜನವರಿ 2026 ರ ಸುತ್ತೋಲೆಯಂತೆ National Instructor Management System (NIMS) ರಲ್ಲಿ ರಿಜಿಸ್ಟ್ರೇಷನ್ ಮಾಡಿಕೊಳ್ಳಬಹುದಾಗಿದೆ.

ಕಾರ್ಯಾಗಾರ ಲೆಕ್ಕಾಚಾರ ಮತ್ತು ವಿಜ್ಞಾನ ಹಾಗೂ ಇಂಜಿನಿಯರಿಂಗ್ ಡ್ರಾಯಿಂಗ್ ವಿಷಯಗಳನ್ನು ಡಿ.ಜಿ.ಟಿ ರವರು ಪ್ರತಿ ವಿಷಯ ವನ್ನು ಬೋಧಿಸಲು 40 ಗಂಟೆಗಳಿಗೆ ಸೀಮಿತಗೊಳಿಸಿ Trade Theory Subject ಜೊತೆಗೆ ವಿಲೀನಗೊಳಿಸಿರುವುದರಿಂದ ಹೆಚ್ಚುವರಿ ಸಿಬ್ಬಂದಿಯನ್ನು ಪರಿಷ್ಕೃತ ಅನುದಾನ ಸಂಹಿತೆ 2025 ರ CHAPTER V ನಿಯಮ 8 ಕಂಡಿಕೆ (23) ರಂತೆ ಒಂದೇ ಆಡಳಿತ ಮಂಡಳಿಯ ವ್ಯಾಪ್ತಿಯಲ್ಲಿ ಬರುವ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿನ ಹಾಗೂ ಇತರೆ ಅನುದಾನಿತ ಸಂಸ್ಥೆಗಳಲ್ಲಿ ಖಾಲಿ ಇರುವ ಅನುದಾನಿತ ಹುದ್ದೆಗಳ ಎದುರಿಗೆ ಡಿ.ಜಿ.ಟಿ ನಿಯಮಾನುಸಾರ ಬೋಧಿಸಲು ಅರ್ಹರಿರುವ ಅನುದಾನಿತ ಸಿಬ್ಬಂದಿಯವರನ್ನು ವರ್ಗಾಯಿಸಲು ಸಂಸ್ಥೆಗಳ ಆಡಳಿತ ಮಂಡಳಿಯವರ ಪರಸ್ಪರ ಸಹಮತಿಯೊಂದಿಗೆ ಪ್ರಸ್ತಾವನೆ ಸಲ್ಲಿಸಲು ಆಯುಕ್ತಾಲಯದಿಂದ ದಿನಾಂಕ:17/02/2026 ರಂದು ಸುತ್ತೋಲೆ ಹೊರಡಿಸಿ, ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ. ಸ್ವೀಕೃತಗೊಂಡ ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ಹೆಚ್ಚುವರಿ ಹುದ್ದೆಗಳನ್ನು ಖಾಲಿ ಹುದ್ದೆಗಳ ಎದುರಿಗೆ ವರ್ಗಾಯಿಸಲು ಕ್ರಮವಹಿಸಲಾಗುವುದು.

**ಕೌಲುಜೀಇ 25 ಕೈತಪ್ರು 2026**

(ಡಾ. ಶರಣಪ್ರಕಾಶ ಆರ್ ಪಾಟೀಲ)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.